**ಕರ್ನಾಟಕ ಸರ್ಕಾರ**

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

---

**ಸಂ:ವಿಪತ್ತು ನಿರ್ವಹಣೆ:ಕೋವಿಡ್-19:ಸಿಆರ್-1/2020-21** **ದಿನಾಂಕ:28-3-2020**

**ಅಧಿಕೃತ ಜ್ಞಾಪನ ಪತ್ರ**

**ವಿಷಯ:** ಕೊರೋನಾ ವೈರಸ್ (ಕೋವಿಡ್-19) ನಿಂದ ಉಂಟಾಗಬಹುದಾದ ಪರಿಸ್ಥಿತಿಯನ್ನು ನಿಭಾಯಿಸಲು ತೆರೆಯಲಾಗಿರುವ "ಕೋವಿಡ್-19 ಆಸ್ಪತ್ರೆ" ಗಳ ಉಸ್ತುವಾರಿಗಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸುವ ಬಗ್ಗೆ.

****%%****

ಕೊರೋನಾ ವೈರಸ್ (ಕೋವಿಡ್-19) ಸಾಂಕ್ರಾಮಿಕ ರೋಗ ತಡೆ ಹಾಗೂ ನಿಯಂತ್ರಣ ಕಾರ್ಯದ ನಿಮಿತ್ತ ಗುರುತಿಸಲಾಗಿರುವ ಸ್ಥಳಗಳಲ್ಲಿ **"ಕೋವಿಡ್-19 ಆಸ್ಪತ್ರೆ"** ತೆರೆಯಲು ಕ್ರಮ ಕೈಗೊಳ್ಳಲಾಗಿದ್ದು, ಇಲ್ಲಿ ಅವಶ್ಯಕ ವ್ಯವಸ್ಥೆ ಕಾರ್ಯವನ್ನು ಕೈಗೊಳ್ಳಲು ಕೆಳಕಂಡ ಅಧಿಕಾರಿಗಳ ತಂಡವನ್ನು ರಚಿಸಿ ಆದೇಶಿಸಿದೆ.

| ಕ್ರಸಂ | ಅಧಿಕಾರಿಗಳ ವಿವರ |
|---|---|
| 1 | ಉಪವಿಭಾಗಾಧಿಕಾರಿಗಳು<br>ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ |
| 2 | ಕಾರ್ಯಪಾಲಕ ಅಭಿಯಂತರರು<br>ಲೋಕೋಪಯೋಗಿ ವಿಭಾಗ ಚಿತ್ರದುರ್ಗ |
| 3 | ಡಾ:ಪ್ರಕಾಶ್, ವೈದ್ಯಾಧಿಕಾರಿಗಳು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ |

**ಜವಾಬ್ದಾರಿ ಮತ್ತು ಕರ್ತವ್ಯಗಳು:-**

- ಕೋವಿಡ್-19 ರೋಗ ನಿಯಂತ್ರಣಕ್ಕಾಗಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ "ಕೋವಿಡ್-19 ಆಸ್ಪತ್ರೆ" ( ಸರ್ಕಾರಿ ಕಲಾ ಕಾಲೇಜು ಹಾಗೂ ವಿಜ್ಞಾನ ಕಾಲೇಜು ಕಟ್ಟಡ ಪ್ರತಿ ಕಟ್ಟಡದಲ್ಲಿ ಕನಿಷ್ಟ 200 ಹಾಸಿಗೆ ಸಾಮರ್ಥ್ಯ) ಅವಶ್ಯವಿರುವ ಮೂಲಭೂತ ಸೌಕರ್ಯಗಳ ವ್ಯವಸ್ಥೆಗೆ ಕ್ರಮವಹಿಸುವುದು.
- ಕೋವಿಡ್-19 ವೈದ್ಯಕೀಯ ರಕ್ಷಣಾ ಸಾಮಗ್ರಿಗಳನ್ನು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ ಇವರಿಂದ ಪೂರ್ವಾನುಮೋದನೆ ಪಡೆದು ಬಳಕೆ ಮಾಡುವುದು ಹಾಗೂ ಪಡೆಯಲಾದ ಸಾಮಗ್ರಿಗಳಿಗೆ ಪ್ರತ್ಯೇಕವಾಗಿ ಸ್ಟಾಕ್ ಮತ್ತು ವಿತರಣಾ ವಹಿಯನ್ನು ಹಾಗೂ ಬಳಕೆ ಹಾಗೂ ಉಳಿಕೆ ಪ್ರಮಾಣದ ಬಗ್ಗೆ ಮಾಹಿತಿಯನ್ನು ಸಲ್ಲಿಸುವುದು.
- "ಕೋವಿಡ್-19 ಆಸ್ಪತ್ರೆ"ಗಳಲ್ಲಿ ಅವಶ್ಯವಿರುವ ಸಾಮಗ್ರಿಗಳ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ರಚಿಸಲಾಗಿರುವ ತಂಡಕ್ಕೆ ಬೇಡಿಕೆ ಪಟ್ಟಿ ಒದಗಿಸಿ, ಸಾಮಗ್ರಿಗಳನ್ನು ದೊರಕಿಸುವ ಕಾರ್ಯ ನಿರ್ವಹಿಸುವುದು.
- "ಕೋವಿಡ್-19 ಆಸ್ಪತ್ರೆ"ಗೆ ದಾಖಲಾಗುವ ರೋಗಿಗಳಿಗೆ ಹಾಗೂ ಕಾರ್ಯನಿರ್ವಹಿಸುವ ವೈದ್ಯಕೀಯ ಸಿಬ್ಬಂದಿಗಳಿಗೆ ಅಗತ್ಯ ವೈಯಕ್ತಿಕ ರಕ್ಷಣಾ ಸಾಮಗ್ರಿಗಳನ್ನು ಒದಗಿಸುವ ಕಾರ್ಯವನ್ನು ನಿರ್ವಹಿಸುವ ವ್ಯವಸ್ಥೆ ಮಾಡುವುದು.

- ಇಲ್ಲಿ ಅಗತ್ಯ ನುರಿತ ವೈದ್ಯಕೀಯ ಸಿಬ್ಬಂದಿಗಳನ್ನು ಪಾಳಿ ಆಧಾರದ ಮೇಲೆ ಕಾರ್ಯನಿರ್ವಹಿಸುವ ವ್ಯವಸ್ಥೆ ಮಾಡುವುದು.
- ಜಿಲ್ಲಾಧಿಕಾರಿಗಳು ಕಾಲ ಕಾಲಕ್ಕೆ ನೀಡುವ ಸಲಹೆ, ಸೂಚನೆಗಳಂತೆ ಕಾರ್ಯನಿರ್ವಹಿಸುವುದು.

(ಆರ್.ವಿನೋತ್ ಪ್ರಿಯಾ)
ಜಿಲ್ಲಾಧಿಕಾರಿಗಳು
ಚಿತ್ರದುರ್ಗ ಜಿಲ್ಲೆ

ಪ್ರತಿಯನ್ನು:-

1. ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ
3. ಉಪವಿಭಾಗಾಧಿಕಾರಿಗಳು, ಚಿತ್ರದುರ್ಗ
4. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ವಿಭಾಗ, ಚಿತ್ರದುರ್ಗ
5. ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳು, ಚಿತ್ರದುರ್ಗ
6. ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ.